# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಕಾರವಾರ

ಪಿ.ಸಿ.ಆರ್ಃ ನಂಃ 1-2018

ಪಿಡಬ್ಲೂಃ 1

ಸಾಕ್ಷಿಧಾರರ ಹೆಸರು : ಪ್ರವೀಣ ಪಾಂಡುರಂಗ ಪರುಳೇಕರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 6-1-2018

## ಫಿರ್ಯಾದಿದಾರವರ ಪ್ರಾಮಾಣೀಕೃತ ಸ್ವಇಚ್ಛಾ ಹೇಳಿಕೆ ಃ

ನನ್ನ ಫಿರ್ಯಾದಿಯ ಪ್ರಾಮಾಣೀಕೃತ ಹೇಳಿಕೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯ ಸತ್ಯದಿಂದ ಕೂಡಿದ್ದು ಅವುಗಳನ್ನು ನನ್ನ ಹೇಳಿಕೆ ಪ್ರಕಾರ ಬರೆಯಲಾಗಿದೆ.

ಆರೋಪಿತನು ನನಗೆ ಕೊಟ್ಟ ಚೆಕ್ಕಿನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಆರೋಪಿತನ ಸಹಿಯನ್ನು ನಿಪಿ-1 ಎ ಎಂದು, ದಿಃ 1-12-2017 ರಂದು ಸಿಂಡಿಕೇಟ್ ಬ್ಯಾಂಕ್ ಕಾರವಾರ ಶಾಖೆಯವರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ನಾನು ನಿಪಿ-1 ರ ಚೆಕ್ಕನ್ನು ಕರ್ನಾಟಕ ಬ್ಯಾಂಕ್ ಕಾರವಾರ ಶಾಖೆಗೆ ಹಾಕಿದ ಬಗ್ಗೆ ರಸೀದಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-3 ಎಂದು, ದಿಃ 11-12-2017 ರಂದು ನನ್ನ ವಕೀಲರ ಮೂಲಕ ಆರೋಪಿತನಿಗೆ ನೀಡಿರುವ ಲೀಗಲ್ ನೋಟಿಸಿನ ವಕೀಲರ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು, ಆರ್‌ಪಿಡಿ ರಸೀದಿಯನ್ನು ನಿಪಿ-5 ಎಂದು, ನಾನು ಕಳಿಸಿದ ನೋಟಿಸ್ ಆರೊಪಿತನಿಗೆ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ಪತ್ರವನ್ನು ನಿಪಿ-6 ಎಂದು ಗುರುತಿಸಲಾಯಿತು.

ಆದ್ದರಿಂದ ಆರೋಪಿತನ ವಿರುದ್ದ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನನ್ನ ಪ್ರಾರ್ಥನೆ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರ.ದ.ನ್ಯಾ.ದಂ. ಕಾರವಾರ